REVIEW OF RESEARCH
IMPACT FACTOR : 5.2331(UIF) UGC APPROVED JOURNAL NO. 48514 ISSN: 2249-894X
VOLUME - 7 | ISSUE - 8 | MAY - 2018

# ಮರೆಯಾಗುತ್ತಿರುವ ಧೃಪದ ಗಾಯನ



ಡಾ.ಗುರುರಾಜ ಶೇಷಗಿರಿ ದಂಡಾಪೂರ
ಮುಖ್ಯಸ್ಥರು , ನೂತನ ವಿದ್ಯಾಲಯ ಸಂಸ್ಥೆಯ
ಸ್ನಾತಕೋತ್ತರ ಸಂಗೀತ ಕೇಂದ್ರ ಕಲಬುರಗಿ.

ಸಂಗೀತ ಎಂದೊಡನೆ ನಮ್ಮ ಕಲ್ಪನೆಗೆ ಬರುವದು ಚಲನಚಿತ್ರ ಸಂಗೀತ, ಸುಗಮ ಸಂಗೀತ, ದಾಸರ ಪದಗಳು ವಚನಗಳು ಭಾವಗೀತೆಗಳು, ಇತ್ಯಾದಿ. ಆಧುನಿಕ ಯುಗದಲ್ಲಿ ಮಾನವ ತನ್ನ ದೈನಂದಿನ ಕಾರ್ಯಗಳಲ್ಲಿ ತೊಡಗಿರುವದರಿಂದ ಎರಡು ಮೂರು ಗಂಟೆಗಳ ವರೆಗೆ ಸಂಗೀತ ಕಾರ್ಯಕ್ರಮಗಳನ್ನು ಆಸ್ವಾದಿಸುವಷ್ಟು (ಕೇಳುವಷ್ಟು) ಸಮಯವಿಲ್ಲ. ಹೀಗಾಗಿ ಶಾಸ್ತ್ರೀಯ ಗಾಯನವಾಗಲೀ, ಶಾಸ್ತ್ರೀಯ ಗಾಯನ ಶೈಲಿಯ ಮೂಲ ಸ್ವರೂಪ ಧೃಪದ ಗಾಯನ ಶೈಲಿಗಳು ನೇಪಥ್ಯಕ್ಕೆ ಸರಿಯುತ್ತಿರುವದು ವಿಶಾದದ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ಧೃಪದ ಗಾಯನ ಶೈಲಿಯ ಹುಟ್ಟು ಮತ್ತು ವಿಕಾಸದ ಕುರಿತಾದ ಸಂಕ್ಷಿಪ್ತ ಪರಿಚಯ ಮಾಡಿಕೊಡುವದು ಈ ಲೇಖನದ ಧ್ಯೇಯೋದ್ದೇಶವಾಗಿದೆ.

ಸಂಗೀತದಲ್ಲಿ ಗಾಯನವು ಪ್ರಾಧಾನ್ಯತೆ ಹೊಂದಿರುವದರಿಂದ ಕಾಲಕ್ರಮೇಣ ಬದಲಾವಣೆಗಳು ಮಾರ್ಪಾಡುಗಳು ಆಗಿವೆ. ಅವುಗಳಲ್ಲಿ ಸಾಮಗಾನ ಪದ್ಧತಿಯಿಂದ ಮಾರ್ಗ ಸಂಗೀತ ಹಾಗೂ ದೇಶೀ ಸಂಗೀತ ಎಂಬುದಾಗಿ ಎರಡು ಪ್ರಕಾರಗಳು ಇವೆರಡರಿಂದ ಗ್ರಾಮ–ಮೂರ್ಛನಾ ಗಾಯನ ಪದ್ಧತಿ ಬೆಳಕಿಗೆ ಬಂತು. ಅನಂತರ ಅಂದರೆ ಸುಮಾರು ಹದಿನೈದನೇ ಶತಮಾನದಲ್ಲಿ ಧೃಪದ ಗಾಯನವು ಪ್ರಚಾರಕ್ಕೆ ಬಂತು. ಮೂಲತ: "ಧೃವ" – "ಪದ" ಎಂಬ ಸಂಸ್ಕೃತ ಶಬ್ದಗಳಿಂದ ಧೃಪದ ಶಬ್ದವು ನಿಷ್ಪತ್ತಿಯಾಗಿದೆ.

### ಸಂಗೀತದಲ್ಲಿ ಧೃಪದ ಗಾಯಕಿಯ ವಿಕಾಸ:

ಸಂಗೀತವು ಮಾನವನ ಕಲ್ಪನಾಶಕ್ತಿ ಹಾಗೂ ಉತ್ಪಾದಕ ಶಕ್ತಿಯ ಕೊಡುಗೆಯಾಗಿದೆ. ನಿಸರ್ಗದಿಂದ ಹುಟ್ಟಿದ ಅನೇಕ ಸುಮಧುರ ಧ್ವನಿಗಳನ್ನು ಕೇಳಿ ಅಂತಹ ಧ್ವನಿಗಳನ್ನೇ ಅನುಕರಣದಿಂದ ಉತ್ಪನ್ನ ಮಾಡಬೇಕೆಂಬ ಆಸೆ ಉಂಟಾಯಿತು. ಕಾಲಕ್ರಮೇಣ ಅವನಿಗೆ ಈ ಪ್ರಕೃತಿಯು ಬೇರೆ ಬೇರೆ ಸ್ವರಗಳನ್ನು ಅನುಕರಣೆ ಮಾಡುವಲ್ಲಿ ಪ್ರೇರೇಪಣೆ ನೀಡಿತು. ಮುಂದೆ ಅವನು ತನ್ನ ಕಲ್ಪನಾ ಶಕ್ತಿಯ ಬಲದಿಂದ ಅನೇಕ ಮಧುರ ಸಂಗೀತೋಪಯೋಗಿ ಸ್ವರಗಳನ್ನು ಸೃಷ್ಟಿ ಮಾಡಿದನು. ಇದೇ ಸಂಗೀತಕ್ಕೆ ಹಿನ್ನೆಲೆಯಾಗಿರಬಹುದು. ದೇವರ ಸಾಕ್ಷಾತ್ಕಾರಕ್ಕೆ ಸಾಧನವಾಗಬಲ್ಲ ನಿಯಮಬದ್ಧ ಸಂಗೀತವನ್ನೇ ಭರತ ಮುನಿಯು 'ಮಾರ್ಗಸಂಗೀತ' ವೆಂದು ತನ್ನ ಗ್ರಂಥದಲ್ಲಿ ಉಲ್ಲೇಖಿಸಿದ್ದಾನೆ.

ಸಂಗೀತ ಲೋಕದಲ್ಲಿ ಮಹಾನ ಕಲಾವಿದರು ತಮ್ಮ ಕಲ್ಪನಾ ಸಾಮರ್ಥ್ಯದಿಂದ ಸಂಗೀತ ಕಲೆಯಲ್ಲಿ ವೈವಿಧ್ಯಪೂರ್ಣವಾದ ತಮ್ಮದೇ ಆದ ಶೈಲಿಯನ್ನು ಕೊಡುಗೆಯಾಗಿ ನೀಡಿದ್ದಾರೆ. ಇವುಗಳನ್ನೇ ಗಾಯನ 'ಶೈಲಿ' ಅಥವಾ 'ಪದ್ಧತಿ' ಎಂದು ಕರೆದಿದ್ದಾರೆ. ಇಂತಹ ಶೈಲಿಗಳೇ ಘರಾಣೆಗಳು ಉತ್ಪನ್ನವಾಗುವದಕ್ಕೆ ಕಾರಣವಾದವು. ಹದಿನೈದನೇ ಶತಮಾನದಲ್ಲಿ ರಾಜಾ ಮಾನಸಿಂಹನು ತನ್ನ ರಾಣಿಯಾದ ಮೃಗನಯನೆಯ ಮನ:ತೃಪ್ತಿಗೋಸ್ಕರವಾಗಿ ಅನೇಕ ಧೃಪದ ಗೀತೆಗಳನ್ನು ರಚಿಸಿ, ಗಾಯನ ಶೈಲಿಯ ಪ್ರಚಾರ ಮಾಡಿದನು.

### ಧೃಪದ ಶೈಲಿಯ ಬೆಳವಣಿಗೆ ಮತ್ತು ವಿಕಾಸ

ಗೀರ್ವಾಣ ಮಧ್ಯೆ ದೇಶೀಯ: ಭಾಷಾಸಾಹಿತ್ಯರಾಜತಂ
ದ್ವಿಚತುರ್ವಾಕ್ಯ ಸಂಪನ್ನಂ ನರ ನಾರೀಕಥಾಸ್ವಯಂ
ಶೃಂಗಾರ ರಸ ಭಾವಾರ್ಥಂ ರಾಗಮಾಲಾತದಾತ್ಮಕಂ
ಪದಾಂತಾನುಪ್ರಾಸಯುಕ್ತಂ ಪಾದಾನುಯುವಕಂಚವ
ಪ್ರತಿಪಾದಂ ಯತ್ರ ಬದ್ಧ ಮೇವಂಪಾದ ಚ್ಚತುಷ್ಟಯಂ
ಉದ್ಗ್ರಾಹ ಧ್ರುವ ಕಾಂಭೊಗಾಂತರಂ ಧೃವಪದಂ ಸ್ಥಿತಂ.

ಅನುರೂಪಸಂಗೀತರತ್ನಾಕರ

ಧ್ರುವಪದ ಅಥವಾ ದೃಪದವು ಗೀರ್ವಾಣ ಮಧ್ಯದೇಶಿಯ ಭಾಷಾ ಸಾಹಿತ್ಯದಲ್ಲಿ ಎಂಟು ಸಾಲುಗಳಿಂದ ರಚಿತವಾಗಿದ್ದು ನರ ನಾರೀಕಥಾರಚನೆಗಳನ್ನೊಳಗೊಂಡು ಶೋಭಿಸುತ್ತದೆ. ದೃಪದವು ಪ್ರಮುಖವಾಗಿ ಶೃಂಗಾರ ರಸದಿಂದ ಒಡಗೂಡಿದ್ದು ರಾಗ ಭಾವಕದಕ್ಕೆ ಉಚಿತವಾದ ಪದಗಳಿಂದ ಧೃಪದ ಗಾಯನದ ಮೂಲವನ್ನು ನಾವು ಪ್ರಬಂಧ ಗಾಯನ ಪದ್ಧತಿಯಲ್ಲಿ ಕಾಣಬಹುದಾಗಿದೆ (13ನೇ ಶತಮಾನ). ಮುಂದೆ ಕಾಲಕ್ರಮೇಣ ಮಧ್ಯಕಾಲದಲ್ಲಿ ಈ ಗಾಯನ ಪದ್ಧತಿಯಲ್ಲಿ ಸಂಸ್ಕೃತ ಭಾಷೆಗೆ ಬದಲಾಗಿ ಹಿಂದೀ ಭಾಷೆಯು ಇದ್ದುದು ಕಂಡುಬರುತ್ತದೆ.

ಧೃಪದ ಈ ಶಬ್ದವು ಸಂಸ್ಕೃತ ದೃಪದ್ ಇದರ ಹಿಂದೀ ರೂಪವಾಗಿದೆ. ಶಬ್ದೋತ್ಪತ್ತಿಯ ದೃಷ್ಟಿಯಿಂದ ಧ್ರುವ ಮತ್ತು ಪದ ಇವೆರಡರ ಸಂಯೋಗವಾಗಿ ಧ್ರುವ ಪದವಾಗಿದೆ. "ಧ್ರುವ ಎಂದರೆ "ನಿಶ್ಚಿತ" ಕಠಿಣ ಎಂಬ ಅರ್ಥದಲ್ಲಿದ್ದರೆ "ಪದ" ಇದು "ಶಬ್ದ" ಅಥವಾ "ವರ್ಣ" ಎಂಬ ಅರ್ಥಕೊಡುತ್ತದೆ. ಆದುದರಿಂದ ಧ್ರುವಪದ ಎಂದರೆ ನಿಶ್ಚಿತ ಅಥವಾ ಒಚಿದು ನಿರ್ಧಿಷ್ಟ ರಚನೆಗೆ ಒಷಪಡಿಸಿದ ಶಬ್ದಗಳ ಅಥವಾ ಪದಗಳ ಲಾಲಿತ್ಯಪೂರ್ಣ ರಚನೆ ಎನ್ನಬಹುದು. (A Composition in which the Padam or Padas are set in a definite structure or pattern).

ಇದರಿಂದ ಧೃಪದ ಶೈಲಿಯಲ್ಲಿ ಪದ ಅಥವಾ ಸಾಹಿತ್ಯಕ್ಕೆ ಮಹತ್ವದ ಸ್ಥಾನಮಾನವಿದ್ದು ಜೊತೆಗೆ ಶಾಸ್ತ್ರೀಯ ಕಟ್ಟುನಿಟ್ಟುಗಳ ಪರಿಪಾಲನೆಗೆ ನಿಷ್ಠುರ ನಿಯಮ ಇದ್ದುದು ಕಂಡುಬರುತ್ತದೆ. ಈ ಮೊದಲಿನ ಜಾತಿ ಗಾಯನ ಗ್ರಾಮರಾಗಗಳಲ್ಲಿ ಪದ, ಶಬ್ದಕ್ಕೆ ಯಾವ ಪ್ರಾಧಾನ್ಯತೆಯೂ ಇರಲಿಲ್ಲ. ಅಲ್ಲಿ ಪದಗಳು ಕೇವಲ ಸ್ವರ ಮತ್ತು ಲಯಗಳ ಅಭಿವ್ಯಕ್ತಿಗೆ ಸಹಾಯಕಾರಿಯಾಗಿದ್ದವು. ಧೃಪದದಲ್ಲಿಯ ಕಾವ್ಯದ ಮತ್ತು ಸಾಹಿತ್ಯದ ಅಂಗ ಅಂಶಗಳು ಪ್ರಬಂಧದ ಕೊಡುಗೆಯಾಗಿದ್ದು ಪ್ರಬಂಧವೇ 'ಧೃಪದ'ನ ಮೂಲ ಉತ್ಪತ್ತಿ ಸ್ಥಾನವಾಗಿದೆ.

ಭರತ ಮುನಿಯು ತನ್ನ ನಾಟ್ಯಶಾಸ್ತ್ರದಲ್ಲಿ ಪ್ರಬಂಧದ ಬಗೆಗೆ ಯಾವ ಉಲ್ಲೇಖವನ್ನೂ ಮಾಡಿಲ್ಲ ಇದರಿಂದ ಭರತನ ಕಾಲಾವಧಿಯಲ್ಲ. ಪ್ರಬಂಧ ಗಾಯನವು ಪ್ರಚಾರದಲ್ಲಿ ಬಂದಿರಲಿಲ್ಲ ಎಂಬುದು ಸಿದ್ಧವಾಗುತ್ತದೆ. ಪ್ರಬಂಧದ ಉಲ್ಲೇಖವು ಪ್ರಪ್ರಥಮವಾಗಿ ಮತಂಗ ಮುನಿಯ "ಬೃಹದ್ದೇಶೀಯ" ಗ್ರಂಥದಲ್ಲಿ (6ನೇ ಶತಮಾನ) ಬರುತ್ತದೆ. ಪ್ರಬಂಧ ಮತ್ತು ಧ್ರುವ ಪದಗಳು ಪ್ರಚಾರದಲ್ಲಿ ಬರಬೇಕಾದರೆ ಒಂದು ದೀರ್ಘ ಕಾಲಾವಧಿ ದಾಟಿರಬೇಕು.

ಈ ಕಾಲಾವಧಿಯಲ್ಲಿ ಧೃಪದವು ಪ್ರಬಂಧಗಾಯನವನ್ನು ಆಧರಿಸಿ ಬೆಳೆದುಕೊಂಡು ಬಂದಿತು. ಈ ದೀರ್ಘಕಾಲಾವಧಿಯಲ್ಲಿ ವಿಕಾಸ ಹೊಂದಿ ಬೆಳೆದು ಬಂದ ಧೃಪದವು ಇಂದಿಗೆ ಅನೇಕ ಬದಲಾವಣೆಯನ್ನು ಹೊಂದುತ್ತ ಆಧುನಿಕ ಸ್ವರೂಪಕ್ಕೆ ಬಂದಿದೆ. ಹೀಗಾಗಿ ಧೃಪದ ಸ್ವರೂಪವು ಅದರ ಭಾಗ ವಿಭಾಗಗಳ, ಉದ್ದಳತೆಯ ಮತ್ತು ಭಾಷೆಯ ದೃಷ್ಟಿಯಿಂದ ಪ್ರಸಂಗದ ದೃಷ್ಟಿಯಿಂದಲೂ ತೀರಾ ಬದಲಾಗಿದೆ.

ಧೃಪದಗಾಯನವು ಹೆಚ್ಚೂ ಕಡಿಮೆ ಪ್ರಾಚೀನಗ್ರಾಮ ಗಾಯನ ಪ್ರಕಾರಕ್ಕೆ ಸೇರುತ್ತದೆ. ಶಾಸ್ತ್ರೀಯ ಸಂಗೀತದಲ್ಲಿ ಇದರ ಎರಡು ಪ್ರಕಾರಗಳು ಉಂಟು 1) ಗಂಧರ್ವಗಾನ: ಇಲ್ಲಿ ಪ್ರಥಮಸ್ಥಾನ ಸ್ವರಕ್ಕೆ ಇದೆ. ನಂತರ ತಾಲ, ಪದ ಇದು ಕೇವಲ ದೇವರ ಪ್ರಾರ್ಥನೆಗಾಗಿಯೇ ಇದೆ.

2) ಗಾನ: ಇದು ವೈವಿಧ್ಯಪೂರ್ಣ ಶೈಲಿಯಾಗಿದ್ದು ಜನ ಸಾಮಾನ್ಯರಿಗಾಗಿ ಇದೆ. ಮನೋರಂಜನೆಯೇ ಇದರ ಮೂಲಗುರಿಯಗಿದೆ. ಹೀಗಾಗಿ ಈ ಗಾಯನ ಶೈಲಿಯಲ್ಲಿ ಜನರ ಅಭಿರುಚಿಗೆ ತಕ್ಕಂತೆ ಅದು ಬದಲಾಗುತ್ತಲೇ ಬಂದಿತು. ಈ ಶ್ರೇಣಿಗೆ ಧೃಪದ ಗಾಯನ ಸೇರಿ ಶಾಸ್ತ್ರೀಯ ಗಾಯನ ಪರಂಪರೆಯಲ್ಲಿ ಬರುತ್ತಿದೆ. ಆದುದರಿಂದ ಧೃಪದ ಗಾಯನವು 1. ಶಾಸ್ತ್ರೀಯ ಶ್ರೇಣಿಗೆ ಸೇರುತ್ತದೆ. 2. ಧೃಪದ ಗಾಯನದ ಪ್ರಮುಖವಾದ ಗುಣವು ಅದು ಪ್ರಯೋಗಿಸುವ ಸ್ವರ. ಸೌಂದರ್ಯ ಮತ್ತು ಘನತೆಯನ್ನು ಅವಲಂಬಿಸಿದೆ. 3. ಇಲ್ಲಿ ರಾಗವು ಪರಿಶುದ್ಧ ರೀತಿಯಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಬೇರೆ ಬೇರೆ ರಾಗಗಳ ಮಿಶ್ರಣಕ್ಕೆ ಇಲ್ಲಿ ಅವಕಾಶವಿಲ್ಲ. ರಾಗದ ರಸಭಾವಾಭಿವ್ಯಕ್ತಿಯೂ ಇಲ್ಲ ಪರಮ ಪರಿಶುದ್ಧವಾಗಿದೆ. 4. ತಾಲ ಲಯಗಳು ಧೃಪದ ಗಾಯನದ ಇತರ ಮಹತ್ವದ ಗುಣಗಳಾಗಿವೆ. ಈ ದೃಷ್ಟಿಯಿಂದ ಕಲಾವಿದನಿಗೆ ತಾಲ ಲಯದ ಮೇಲೆ ಸಂಪೂರ್ಣ ಪ್ರಭುತ್ವವನ್ನು ಪಡೆದಿರಬೇಕಾಗುತ್ತದೆ. ಈ ಅಭಿಪ್ರಾಯವು ವೀಣಾಪ್ರಕಾಶ ಎಂಬ ಗ್ರಂಥದಲ್ಲಿ ಅಭಿಪ್ರಾಯಪಡಲಾಗಿದೆ.

"ಪೂರ್ವ ಕಾಲದಲ್ಲಿ ಧೃಪದ ಹಾಡುವ ಕಲಾವಿದನು ಧೃಪದ ಕಾವ್ಯ ರಚನೆಯಲ್ಲಿಯ ಬೇರೆ ಬೇರೆ ಸಾಲುಗಳನ್ನು ಬೇರೆ ಲಯಗಳಲ್ಲಿ ಪ್ರಸ್ತುತ ಪಡಿಸಲ್ಪಡುತ್ತಿದ್ದವು. ಹೀಗಾಗಿ ಪ್ರಾಚೀನ ಕಾಲದ ಧೃಪದ ಶೈಲಿಯು ಅತ್ಯಂತ ಕಠಿಣವಾಗಿತ್ತು. ಆದ್ದರಿಂದ ಆಧುನಿಕ ಸಂಗೀತಕಾರರು ಒಂದೇ ತಾಲವನ್ನಾಧರಿಸಿದ ಧೃಪದ ರಚನೆಗಳನ್ನು ಆಯ್ಕೆ ಮಾಡುತ್ತ ಬಂದರು.

ಧೃಪದದ ಇನ್ನಿತರ ಗುಣಗಳೆಂದರೆ ಅದರ ಕಾವ್ಯ ಸಾಹಿತ್ಯವಾಗಿದೆ. ಈ ಸಾಹಿತ್ಯವು ಅತ್ಯಂತ ಗಂಭೀರವೂ ಭವ್ಯವೂ ಆಗಿದೆ. ಆದುದರಿಂದ ಈ ಸಂಗೀತ ಶೈಲಿಯಲ್ಲಿ ಸ್ವರ ಮಾಧುರ್ಯದ ಮತ್ತು ಲಯದ "ಝೋಕ್"ನಷ್ಟೆ ಮಹತ್ವವನ್ನು ಅದರ ಸಾಹಿತ್ಯಕ್ಕೂ ಕೊಡಲ್ಪಟ್ಟದೆ. ಇದಕ್ಕೆ ವ್ಯತಿರಿಕ್ತವಾಗಿ ಆಧುನಿಕ ಶಾಸ್ತ್ರೀಯ ಗಾಯನದಲ್ಲಿ ಸಾಹಿತ್ಯಕ್ಕೆ ಅಷ್ಟೊಂದು ಮಹತ್ವವನ್ನು ಕೊಟ್ಟಿಲ್ಲ. ಈ ದೃಷ್ಟಿಯಿಂದ ಸ್ವರ ತಾಲ ಲಯ ಮತ್ತು ಪದಗಳು ಧೃಪದ ಗಾಯನ ಶೈಲಿಯು ಒಂದು ವೈಶಿಷ್ಟ್ಯಪೂರ್ಣವಾದ ಸಂಗೀತ ಶೈಲಿಯಾಗಿದೆ.

ವೈವಿಧ್ಯಪೂರ್ಣವಾದ ಕ್ಲಿಷ್ಟ ಲಯಕಾರಿಯು ಧೃಪದದ ಇನ್ನೊಂದು ಮಹತ್ವಪೂರ್ಣ ಗುಣವಾಗಿದೆ. ಧೃಪದ ಗಾಯನದಲ್ಲಿಯ ಈ ಕ್ಲಿಷ್ಟವಾದ ಹಾಗೂ ವೈವಿಧ್ಯಪೂರ್ಣ ಲಯಕಾರಿಯ ಮೇಲೆ ಈ ಪೂರ್ವದ ಗ್ಗಿತೆಯ ಪರಿಣಾಮವು ವಿಶೇಷವಾಗಿ ಕಂಡು ಬರುವದು. ಈ ಗೀತೆಯಲ್ಲಿ ಪದ ಮತ್ತು ಲಯದ ಜೊತೆಗೆ ಸ್ವರವರ್ಣ ಹಾಗೂ ಸ್ವರಾಲಂಕಾರಗಳಿದ್ದು ಗೀತೆಗೆ ಮುಖ್ಯವಾಗಿ ಪದ, ತಾಲ ಮತ್ತು ಸ್ವರ ಎಂಬ ಮೂರು ಭಾಗಗಳಿವೆ. ನಾಟ್ಯಶಾಸ್ತ್ರದಲ್ಲಿ ಗೀತೆಯ ಮೊದಲಿನ ಎರಡು ಭಾಗಗಳಿಗೆ ಮಹತ್ವವನ್ನು ಕೊಟ್ಟಿದ್ದು ಕಂಡುಬರುತ್ತದೆ. ನಂತರ ಮೂರನೇಯ ಭಾಗವಾದ ಸ್ವರಕ್ಕೆ ಸ್ಥಾನಮಾನವಿದೆ. ಆದರೂ ಸ್ವರದಿಂದ ಸಂಗೀತವಾದುದರಿಂದ ಸ್ವರಕ್ಕೂ ಅಷ್ಟೇ ಮಹತ್ವವಿದೆ. ಮತಂಗ ಪಾರ್ಶ್ವದೇವ ಮತ್ತು ಶಾರ್ಙ್ಗದೇವ ಇವರು ಸ್ವರ ವರ್ಣಗಳ ಮೇಲೆಯೇ ಗೀತೆಗಳನ್ನು ಪರಿಗಣಿಸಿದ್ದುದು ಕಂಡುಬರುತ್ತದೆ.

ಪದ ಮತ್ತು ತಾಲ ಅಂಗಗಳ ಮೇಲೆ ವಿಭಾಗಿಸಿದ ಗೀತೆಗಳನ್ನು 1) ಮಾಗದಿ 2) ಅರ್ಧಮಾಗದಿ 3) ಸಂಭಾವಿತ ಮತ್ತು 4) ಪ್ರಿತೂಲಾ ಎಂಬ ಹೆಸರಿನಲ್ಲಿ ಗುರುತಿಸಿದ್ದಾರೆ.

ಈ ಗೀತೆಗಳನ್ನು ಪದ, ತಾಲ, ಶೃತಿ, ಗೀತೆಗಳೆಂದೂ ಕರೆದಿದ್ದಾರೆ. ಗೀತೆಯಲ್ಲಿ ಪ್ರತಿಯೊಂದು ಸಾಲಿನಲ್ಲಿ ಹೆಚ್ಚೂ ಕಡಿಮೆ ಪದಗಳಿದ್ದಾಗ್ಯೂ ನಿರ್ದಿಷ್ಟಪಡಿಸಿದ ಒಂದೇ ತಾಲದಲ್ಲಿ ಹಾಡಬೇಕು. ಈ ಮೊದಲು ಗೀತೆಯ ಪ್ರತಿಯೊಂದು ಸಾಲೂ ಆ ಸಾಲಿನಲ್ಲಿ ಇರುವ ಪದಗಳ ಸಂಖ್ಯೆಯನ್ನು ಅವಲಂಬಿಸಿ ಬೇರೆ ಬೇರೆ ಲಯಗಳಲ್ಲಿ ಹಾಡಲಾಗುತ್ತಿತ್ತು. ಉದಾಹರಣೆಗೆ ಮಾಗದಿ ಗೀತೆಯಲ್ಲಿ ಪ್ರಥಮಪದ ಭಾಗದಲ್ಲಿ ಕಡಿಮೆ ಶಬ್ದಗಳು ಇರುವುದರಿಂದ ಅದನ್ನು ವಿಲಂಬಿತ ಲಯದಲ್ಲಿ ಎರಡನೇ ಪದ ಭಾಗದಲ್ಲಿ ಹೆಚ್ಚು ಶಬ್ದಗಳು ಇರುವುದರಿಂದ ಅದನ್ನು ಮಧ್ಯಲಯದಲ್ಲಿ ಇದಕ್ಕೂ ಹೆಚ್ಚಿಗೆ ಶಬ್ದಗಳಿದ್ದ ಮೂರನೇಯದನ್ನು ದೃತ್ ಲಯದಲ್ಲಿ ಹಾಡುತ್ತಿದ್ದರು. ಈ ಪದಾಶ್ರಿತ ತಾಲಾಶ್ರಿತ ಗೀತೆಗಳ ಜೊತೆಗೆ ಶಾರ್ಙ್ಗದೇವನು ಸ್ವರಗಳನ್ನು ಆಶ್ರಯಿಸಿದ ಐದು ಗೀತೆಗಳನ್ನು ಹೆಸರಿಸಿದ್ದಾನೆ. ಇವುಗಳಿಗೆ ಸ್ವರಾಶ್ರಿತ ಗೀತೆಗಳೆಂದು ಹೆಸರು. ಶಾರ್ಙ್ಗದೇವನು ಪದತಾಲಾಶ್ರಿತ ಹಾಗೂ ಸ್ವರಾಶ್ರಿತ ಗೀತೆಯ ಪ್ರಕಾರಗಳೆಡನ್ನೂ ಪುರಸ್ಕರಿಸಿದ್ದಾನೆ. ಅಂದರೆ ಶಾರ್ಙ್ಗದೇವನ ಕಾಲಕ್ಕೆ ಇವೆರಡೂ ಗೀತ ಪ್ರಕಾರಗಳು ಪ್ರಚಾರದಲ್ಲಿದ್ದವೆಂದು ತಿಳಿದುಬರುತ್ತದೆ. ಶಾರ್ಙ್ಗದೇವನ 5 ಸ್ವರಾಶ್ರಿತ ಪ್ರಕಾರಗಳು ಹೀಗೆವೆ.

1) ಶುದ್ಧಗೀತೆ: – ಇಲ್ಲಿ ಸ್ವರಗಳ ಪ್ರಯೋಗವು ನೇರವಾಗಿದೆ ಮತ್ತು ಸರಳವಾಗಿಯೂ ಇರುತ್ತದೆ.

2) ಭಿನ್ನಗೀತೆ: – ಇಲ್ಲಿ ಸ್ವರಗಳ ಪ್ರಯೋಗವು ವಕ್ರವಾಗಿದೆ ಮತ್ತು ಸ್ಪುರಿತ ಪ್ರಕಾರ ಮತ್ತು ಈ ಸ್ವರಗಳು ಗಮಕ ಅಂಗವನ್ನು ಹೊಂದಿವೆ.

3) ಗೌಡೀಗೀತೆ: – ವೈಭವಪೂರ್ಣ ಸ್ವರಗಳ ಗಮಕ ಪ್ರಯೋಗವು ಇಲ್ಲಿ ಆಗುತ್ತಿದ್ದು ಇದು ಮೂರು ಸ್ಥಾನಗಳಲ್ಲಿ ಅಂದರೆ ಮಂದ್ರ, ಮಧ್ಯ, ತಾರಗಳಲ್ಲಿ ಆಗುತ್ತಿದ್ದು ಈ ಗಮಕಗಳ ಜೊತೆಗೇನೇ ಸ್ವರ ಪ್ರಯೋಗವೂ ಇದೆ. ಈ ಪ್ರಯೋಗವು "ಔಹಾತಿ" ಅಂಗದೊಂದಿಗೆ ಪ್ರಯೋಗವಾಗುತ್ತಿರುತ್ತದೆ.

4) ವೇಸರ ಅಥವಾ ವೇದ ಸ್ವರಾಗೀತೆ: – ಇಲ್ಲಿ ನಾಲ್ಕು ಸ್ವರ ವರ್ಣಗಳು ತ್ವರಿತಗತಿಯಲ್ಲಿ ಪ್ರಯೋಗಿಸಲ್ಪಟ್ಟು ಸಂಗೀತವು ತೇಜೋಮುಖವಾಗಿ ಕೇಳಿ ಬರುವದು.

5) ಸಾಧಾರಣಗೀತೆ:– ಇದು ಈ ಹಿಂದಿನ ನಾಲ್ಕೂ ಗೀತೆಗಳ ಸುಂದರ ಸಮನ್ವಯ ಸ್ವರೂಪವಾಗಿದೆ.

ದೃಪದದಲ್ಲಿ ಎರಡು ಪ್ರಕಾರಗಳು ನಾವು ಕಾಣುತ್ತೇವೆ. ಇಲ್ಲಿ ಸ್ವರ ಮತ್ತು ಪದಗಳಿಗೆ ಸಮಾನ ಸ್ಥಾನಮಾನವಿದೆ. ಪದಾಶ್ರಿತ ಗೀತೆಗಳಿಗೆ, ಲಯ ಮತ್ತು ತಾಳಗಳು ಪ್ರಮುಖವಾಗಿದ್ದು, ಅಲ್ಲಿ ಬಾಣಿಯ ಸ್ವರಾಶ್ರಿತ ಗೀತೆಯ ವಿಶೇಷ ಧ್ವನಿ ಪೂರ್ಣ ಅಂಶವಾಗಿದೆ. ದೃಪದ ಸಂಗೀತದ ಸುವರ್ಣ ಕಾಲಾವಧಿಯಲ್ಲಿ ಈ ಬಾಣಿಯ ನಾಲ್ಕೂ ಪ್ರಕಾರಗಳು ಒಳ್ಳೆಯ ಉಚ್ಚ್ರಾಯಸ್ಥಿತಿಯಲ್ಲಿದ್ದು ದೃಪದವು ಈ ನಾಲ್ಕೂ ಬಾಣಿಗಳಲ್ಲಿ ಪ್ರಸ್ತುತಪಡಿಸಲಾಗುತ್ತಿತ್ತು. ಆದರೆ ಆಧುನಿಕ ಕಾಲದಲ್ಲಿ ಈ ಬಾಣಿ ಪ್ರಣಾಳಿ ಬಿದ್ದು ಹೋಗಿ ಇಂದು ದೃಪದ ಪ್ರಸ್ತುತವಾಗಿದೆ.

ದೃಪದ ಗಾಯನದಿಂದ ಖ್ಯಾಲಗಾಯನಕ್ಕೆ ಹೆಚ್ಚು ಗತಿ ಗಾಂಭೀರ್ಯ ಖಚಿತವಾದ ಲಯದ ಅಂತರಗಳು ದೃಪದವನ್ನು ಸಾಧಿಸುವುದರಿಂದ ಖ್ಯಾಲ ಗಾಯನಕ್ಕೆ ದೊರಕುವ ಉಪಯುಕ್ತ ಅಂಶವಾಗಿದೆ. ಇವು ಖ್ಯಾಲ ಗಾಯನದ ಪರಿಣಾಮಕಾರಕ ಅಂಗವಾಗಿ ಬೆಳೆದವು. ಈ ಕಾಲಾವಧಿಯಲ್ಲಿ ಅಲಾಪ ಮೊಟಕುಗೊಂಡು ಈ ಚಿಕ್ಕ ಚಿಕ್ಕ ಅಲಾಪಯುಕ್ತ ದೃಪದವನ್ನು 'ಮುಂಡಾದೃಪದ್' ಎಂದು ಕರೆದರು.

ದೃಪದದ ಚತುರ್ವಾಣಿಗಳು : ಪ್ರಾಚೀನ ಕಾಲದಲ್ಲಿ ದೃಪದ ಕಲಾ ಕೋವಿದನಿಗೆ 'ಕಲಾಕಾರ'; ಅಥವಾ 'ಕಲಾವಂತ' ನೆಂದು ಮನ್ನಿಸುತ್ತಿದ್ದರು. ಇಂಥ ನಾಮಾಂಕಿತ ಕಲಾವಂತರ ವಾಣಿ ವೈಖರಿ ಅವರ ಸಂಗೀತ ಶೈಲಿಯ ವೈಶಿಷ್ಟ್ಯತೆಗಳನ್ನು ಅನುಸರಿಸಿ ದೃಪದ ಗಾಯನದ ಶೈಲಿಯಲ್ಲಿ ನಾಲ್ಕು ವಾಣಿಗಳು (ನಾಲ್ಕು ವರ್ಣಗಳು) ಪ್ರಚಾರದಲ್ಲಿ ಬಂದಿವೆ.

1. ಗೋಬರಹರಿವಾಣಿ ಅಥವಾ ಶುದ್ಧ ವಾಣಿ
2. ಖಂಡಾರ ವಾಣಿ
3. ಡಾಗೂರ ವಾಣಿ
4. ನೋಹಾರ ವಾಣಿ

ಈ ಮೇಲ್ಕಾಣಿಸಿದ ನಾಲ್ಕೂ ವಾಣಿಗಳ ವಿವೇಚನೆಯನ್ನು 'ಹಕೀಂ ಮಹಮ್ಮದ ಕರಮ್ ಇಮಾಮ್' ನು ತನ್ನ 'ಮಾದಮಲ್ ಮೌಸಿಕಿ' ಎಂಬ ಗ್ರಂಥದಲ್ಲಿ ವಿವರವಾಗಿ ಮಾಡಿದ್ದಾನೆ.

ಅಕ್ಬರ ಬಾದಷಹನ ಆಸ್ಥಾನದಲ್ಲಿ ನಾಮಾಂಕಿತ ಕಲಾವಿದರಾದ ಸಂಗೀತ ಸಾಮ್ರಾಟ ತಾನಸೇನನನ್ನು, ಬ್ರಿಜಚಂದ ಬ್ರಾಹ್ಮಣ ರಾಜಾ ಸಮ್ಮೊಖನಸಿಂಹ ವೀಣಾಕಾರ ಮತ್ತು ಶ್ರೀಚಂದ್ರ ರಾಜಪೂತ ಇವರುಗಳಿಂದ ಮೇಲ್ಕಾಣಿಸಿದ ನಾಲ್ಕು ವಾಣಿಯ ಅವಿಷ್ಕಾರಗೊಂಡು ಪ್ರಚಾರದಲ್ಲಿ ಬಂದವು. ತಾನಸೇನನು ಗೌಡ ಸಾರಸ್ವತ ಬ್ರಾಹ್ಮಣನಾಗಿದ್ದರಿಂದ ಆತನ ವಾಣಿಯನ್ನು 'ಗೌಡಿಯ' ಅಥವಾ 'ಗೋಬರ ಹರಿವಾಣಿ' ಎಂದು ಕರೆದರು. ಸುಪ್ರಸಿದ್ಧ ವೀಣಾಕಾರನಾದ ಸಮ್ಮೋಖಸಿಂಹನು ಖಂಡಾರ ಗ್ರಾಮದ ನಿವಾಸಿ ಇದ್ದುದರಿಂದ ಆತನ ವಾಣಿಯನ್ನು ಖಂಡಾರವಾಣಿ ಎಂದು ಕರೆದರು. ಈತನೇ ಮುಂದೆ ತಾನಸೇನನ ಮಗಳನ್ನು ಮದುವೆಯಾಗಿ 'ನೌಬತ್‌ಖಾನ' ಎಂಬ ಹೆಸರಿನಿಂದ ಪ್ರಸಿದ್ಧನಾದನು. 'ಬ್ರಿಜಚಂದ ಬ್ರಾಹ್ಮಣನು' ಡಾಗೂರ ಊರಿನವನಾದುದರಿಂದ ಆತನ ವಾಣಿಯನ್ನು 'ಡಾಗೂರವಾಣಿ' ಎಂದು ಕರೆಯಲಾಯಿತು. ಅದೇ ರೀತಿ ಶ್ರೀಚಂದ್ರ ರಾಜಪೂತ ಕೂಡ ನೋಹಾರ ಗ್ರಾಮದವನಾದ್ದರಿಂದ ಆತನ ವಾಣಿಯನ್ನು ನೋಹಾರವಾಣಿ ಎಂದು ಕರೆಯಲ್ಪಟ್ಟಿತ್ತು.

ಗೋಬರ ಹರಿವಾಣಿಯು ಪ್ರಸನ್ನಾತ್ಮಕವಾಗಿದ್ದು ಧೀರಗತಿಯುಳ್ಳದ್ದಾಗಿದೆ ಮತ್ತು ಶಾಂತರಸವನ್ನು ಪ್ರತಿಪಾದಿಸುತ್ತದೆ. ಸ್ವರಗಳ ಸುಸ್ಪಷ್ಟತೆಯ ದೃಷ್ಟಿಯಿಂದ ಗೋಬರ ಹರಿವಾಣಿಯನ್ನು 'ಶುದ್ಧವಾಣಿ' ಎಂದು ಕರೆದರು.

ಖಂಡಾರ ವಾಣಿ: ಇದು ವಿಲಾಸಪೂರ್ಣವಾಗಿದ್ದು ಶ್ರೀಮಂತಿಕೆಯ ಆಡಂಬರಗಳಿಂದ ಕೂಡಿ ತೀವ್ರತಮ ಭಾವನೆಗಳ ರಸೋದ್ದೀಪಕವಾಗಿದೆ. ಸ್ವರಗಳನ್ನು ಖಂಡ ಖಂಡವಾಗಿ ಪ್ರಯೋಗಿಸಿ ಸ್ವರಗಳಲ್ಲಿಯ ಏಕಸೂತ್ರತೆಯನ್ನು ಸಾಧಿಸುವುದು ಮತ್ತು ತನ್ಮೂಲಕ ರಸಿಕತೆಯನ್ನು ಸಂಗೀತದಲ್ಲಿ ತರುವುದು ಈ ವಾಣಿಯ ವಿಶೇಷತೆಗಳಾಗಿವೆ. ಈ ವಾಣಿಯಲ್ಲಿ ಭಿನ್ನ ಭಿನ್ನ ಸ್ವರ ವರ್ಣಗಳನ್ನು ರಚಿಸಿ ಪ್ರಯೋಗಿಸುವುದರಿಂದ ಸಂಸ್ಕೃತ ಗ್ರಂಥಕಾರರು ಇದನ್ನು 'ಭಿನ್ನ' ಅಥವಾ 'ಭಿನ್ನಗೀತೆ' ಎಂದು ಕರೆದಿದ್ದಾರೆ. ಸ್ವರಗಳನ್ನು ಖಂಡಖಂಡವಾಗಿ ಪ್ರಯೋಗಿಸುವಾಗ ಗಮಕದ ಸೂಕ್ಷ್ಮ ಅಂಗವು ಕಂಡು ಬಂದು ಈ ವಾಣಿಗೆ ಮಧುರತೆಯ ನೆರವು ಸಹಜವಾಗಿಯೇ ಮೂಡಿ ಜರುಗುವುದು 'ಸೈನೀ' ಎಂಬ ಪಂಗಡದ ಕಲಾವಿದರು ವೀಣೆಯ ಮುಖಾಂತರ ಮಧ್ಯ ಮತ್ತು ದೃತ್‌ಲಯಗಳಲ್ಲಿ ಖಂಡಾರ ವಾಣಿಯನ್ನು ನುಡಿಸುತ್ತ ವೈವಿಧ್ಯಪ್ರರ್ಣ ಗಮಕದ ಅಂಶಗಳನ್ನು ನಿರ್ದೇಶಿಸುತ್ತಾರೆ. ಆ ಕಾಲಕ್ಕೆ 'ರಬಾಬ' ವಾದನದ ಮುಖಾಂತರ ಶುದ್ಧವಾಣಿಯನ್ನು ನುಡಿಸಲಾಗುತ್ತಿತ್ತು. ಈ ವಾದ್ಯದಲ್ಲಿ ಆಲಾಪದ ಅಂಗವು ವಿಲಂಬಿತ ಮಧ್ಯ ದೃತ್‌ಲಯಗಳಲ್ಲಿ ಪರಿಶುದ್ಧವಾಗಿ ವಿಕಾಸವಾಗುವಷ್ಟು ಬೇರಾವ ವಾದ್ಯದಲ್ಲಿಯೂ ಸಾಧ್ಯವಿಲ್ಲ.

ಡಾಗೂರ ವಾಣಿ: ಇದು ಸರಳ ಮತ್ತು ಲಾಲಿತ್ಯಪ್ರರ್ಣವಾಗಿದ್ದು ಸಹಜಗತಿಯಲ್ಲಿ ವಿಕಾಸವಾಗುತ್ತದೆ. 'ಬೃಜ ಚಂದ'ನ ಲಾಲಿತ್ಯಪೂರ್ಣವಾದ ಈ ವಾಣಿಯಲ್ಲಿ ಒಂದು ಸ್ವರವು ಇನ್ನೊಂದು ಸ್ವರದಲ್ಲಿ ಸಮರಸಗೊಂಡಂತೆ ಒಂದು ರಹಸ್ಯಭಾವವು ವ್ಯಕ್ತವಾಗುತ್ತದೆ. ಲಾಲಿತ್ಯ ಮತ್ತು ಗಂಭೀರತೆಯು ಇದರ ವೈಶಿಷ್ಟ್ಯತೆಗಳಾಗಿವೆ.

ನೋಹಾರ ವಾಣಿ: 'ಶ್ರೀಚಂದ್ರ ರಾಜಪೂತ' ನ ವಾಣಿಯ ವೈಖರಿ ಆತನ ಗ್ರಾಮದ ಹೆಸರಿಗೆ ನೋಹಾರವಾಣಿ ಎಂದು ಕರೆದರು. ಇದು ಸಿಂಹದ ಧೀರೋದಾತ್ತ ಗತಿ ಹೊಂದಿದ್ದು ಸ್ವಭಾವದಿಂದ ಗಂಭೀರವಾಗಿದೆ ಒಂದು ಸ್ವರದಿಂದ ಪ್ರಾರಂಭಗೊಂಡು ಮುಂದೆ ಒಂದೆರಡು ಸ್ವರಗಳನ್ನು ಉಲ್ಲಂಘಿಸಿ ಪುನ: ಪ್ರಾರಂಭದ ಸ್ವರಕ್ಕೆ ಲೀಲಾಜಾಲವಾಗಿ ಬರುವುದೇ ಆಗಿದೆ. ಸ್ವರಾಂತರಗಳ ವರ್ಣ ವೈಖರಿಯು ಈ ವಾಣಿಯ ವಿಶೇಷತೆಯಾಗಿದೆ.

ನಾವು ಸಂಗೀತದಲ್ಲಿ ಯಾವುದಕ್ಕೆ ಶುದ್ಧವಾಣಿ ಎಂದು ಕರೆಯುತ್ತೇವೆಯೋ ಅದು ಕೇವಲ ಗೋಬರ ಹರಿವಾಣಿ ಮತ್ತು ಡಾಗೂರ ವಾಣಿಗಳ ರೂಪಾಂತರ ಮಾತ್ರವಾಗಿದೆ. ಶುದ್ಧವಾಣಿಯೇ ಸಂಗೀತದ ಆತ್ಮವಾಗಿದ್ದು ಆನಂದ ಸಾಗರವಾಗಿದೆ. ಅಂತೆಯೇ ತಾನಸೇನವಾಣಿಯ ಪರಂಪರೆ ಕಲಾವಿದರು ಸಂಗೀತದಲ್ಲಿ ಸ್ವರ ಶುದ್ಧತೆಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡುವ ಔಚಿತ್ಯವು ಕಂಡುಬರುತ್ತದೆ.

ಸಂಗೀತ ರಸಿಕರು ಗೋಬರ ಹರಿವಾಣಿಯನ್ನು ರಾಜನೆಂದು ಡಾಗೂರ ವಾಣಿಯನ್ನು ಮಂತ್ರಿ ಎಂದೂ ಖಂಡಾರ ವಾಣಿಯನ್ನು ಸೇನಾಧಿಪತಿ ಎಂದೂ, ಮತ್ತು ನೋಹಾರ ವಾಣಿಯನ್ನು ಭೃತ್ಯ(ಸೇವಕ) ಎಂದು ಕರೆದಿದ್ದಾರೆ.

ಧೃಪದ ಗಾಯನ ಪದ್ಧತಿಯು ಐದಾರು ನೂರು ವರ್ಷ ಕಾಲದಿಂದಲೂ ಪ್ರಚಾರದಲ್ಲಿ ಬೆಳೆದುಕೊಂಡು ಬಂದ ಸಂಗೀತ ಶೈಲಿಯಾಗಿದೆ. ನೂರೈವತ್ತು ವರ್ಷಗಳಿಂದೀಚೆಗೆ ಅದರ ಜನಪ್ರಿಯತೆಯು ಕಡಿಮೆಯಾಗುತ್ತ ನಡೆದಿದೆ. ಆದರೂ ರಸಿಕ ಸಂಗೀತಜ್ಞರು ಈ ಶೈಲಿಯನ್ನು ಭಕ್ತಿ ಶ್ರದ್ಧೆಯಿಂದ ಇಂದಿಗೂ ಕಾಣುತ್ತ ಬಂದಿದ್ದಾರೆ.

ಪ್ರಸ್ತುತ ಕಾಲದಲ್ಲಿ ದೃಪದ ಗಾಯನದ ಪ್ರಚಾರವನ್ನು ಪಂಡಿತ ಡಾಗೂರ ಬಂಧುಗಳು ಹಾಗೂ ಪಂಡಿತ ಗುಂಡೇಚಾ ಬಂಧುಗಳು ಮಾಡುತ್ತಲಿದ್ದಾರೆ ಅಂತೆಯೇ ಇವರ ಶಿಷ್ಯ ಪರಂಪರೆಯನ್ನು ಬೆಳೆಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಈ ದೃಪದ ಶೈಲಿಯನ್ನು ಉಳಿಸಿ ಬೆಳೆಸುವ ಮಹತ್ತರ ಜವಾಬ್ದಾರಿ ಸಂಗೀತ ಗುರುಗಳು ಹಾಗೂ ಶಿಷ್ಯರ ಮೇಲಿದೆ.